**<u>ದಿನಾಂಕಃ 15.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ. ಎ ಎನ್ ಎನ್ ವಕೀಲರಿಂದಃ-</u>**

ದಿಃ 10.11.2015 ರಂದು ತಮ್ಮ ತಾಯಿ ತೀರಿಕೊಂಡಿದ್ದು ಅವರ 11 ನೇ ದಿನದ ಕಾರ್ಯದ ದಿವಸ ಅವರಿಗೆ ಸೇರಿದ ಒಡವೆ ವಸ್ತ್ರಗಳನ್ನು ಅವರ ಫೋಟೋದ ಮುಂದೆ ಇಟ್ಟಿದ್ದೀರಾ ಎಂದರೆ ಸಾಕ್ಷಿಯು ನನ್ನ ಸಹಹೋದರಿಯವರು ಸದರಿ ಒಡವೆ ವಸ್ತ್ರಗಳನ್ನು ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ನನ್ನ ತಾಯಿ ತೀರಿ ಹೋದ ನಂತರ ನನ್ನ ತಾಯಿಗೆ ಒಡವೆ ವಸ್ತ್ರಗಳನ್ನು ನನ್ನ ಸಹೋದರಿಯರು ತೆಗೆದುಕೊಂಡಿಲ್ಲ, ಬದಲಿಗೆ ನಾನೇ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಇದೇ ಚನ್ನಪಟ್ಟಣ ನ್ಯಾಯಾಲಯದಲ್ಲಿ ಅಸಲು ದಾವೆ 48/1991 ದಾವೆಯನ್ನು ದಾಖಲು ಮಾಡಿದ್ದು, ಚನ್ನಪಟ್ಟಣ ನ್ಯಾಯಾಲಯದ ವ್ಯಾಪ್ತಿಗೆ ಸದರಿ ದಾವೆ ಹೂಡಲು ಬರುವುದಿಲ್ಲ ಎಂದು ರಾಮನಗರ ನ್ಯಾಯಾಲಯಕ್ಕೆ ವರ್ಗಾವಣೆಗೊಂಡು, ವರ್ಗಾವಣೆಗೊಂಡ ನಂತರ 55/2004 ಎಂದು ಹೊಸ ನಂಬರಾಗಿ ದಾಖಲಾಗಿರುತ್ತದೆ ಎಂದರೆ ಸರಿ. ಅಸಲು ದಾವೆ ಸಂ ಃ 54/2005 ರಲ್ಲಿ ಈ ದಾವೆಯ 2ನೇ ಪ್ರತಿವಾದಿ ವಾದಿಯಾಗಿದ್ದು ಮತ್ತು ಈ ದಾವೆಯ 1 ನೇ ಪ್ರತಿವಾದಿ ಆ ದಾವೆಯ ಪ್ರತಿವಾದಿಯಾಗಿ ಇದ್ದರು ಎಂದರೆ ಸರಿ. 2ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಿರುದ್ಧ ಮಂಗಳವಾರ ಪೇಟೆ ಗ್ರಾಮ ಸರ್ವೆ ನಂ.541/1 ಆಸ್ತಿಗೆ ಸಂಬಂಧಿಸಿದಂತೆ ದಾವೆ ಮಾಡಿದ್ದರು ಎಂದರೆ ಸರಿ. ಸರ್ವೆ ನಂ.541/1 ರ ಆಸ್ತಿ ಮಾರಾಟದ ಖರೀದಿ ಪತ್ರಕ್ಕೆ ಈ ದಾವೆಯ 1 ಮತ್ತು 2 ನೇ ಪ್ರತಿವಾದಿಯವರು ಸಹಿ ಮಾಡಿಲ್ಲ ಎಂದು ಕ್ರಯಪತ್ರವನ್ನು ಪ್ರಶ್ನಿಸಿ ಅಸಲು ದಾವೆ ಸಂ ಃ 54/2005 ದಾವೆ ಮಾಡಿದ್ದರು ಎಂದರೆ ಸಾಕ್ಷಿಯು ಸದರಿ ಕ್ರಯಪತ್ರಕ್ಕೆ ನನ್ನ ತಂದೆಯನ್ನು ಹೊರತುಪಡಿಸಿ

ನಾನಾಗಲೀ ನನ್ನ ತಂದೆಯಾಗಲೀ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ .ಅಸಲು ದಾವೆ ಸಂ ಃ 54/2005 ರಲ್ಲಿ ನಾವು ರಜೀ ಮಾಡಿಕೊಂಡು ದಾವೆಯನ್ನು ಹಿಂಪಡೆದುಕೊಂಡಿದ್ದೇವೆ ಎಂದರೆ ಸರಿ. ಅಸಲು ದಾವೆ ಸಂ ಃ 54/2005 ದಾವೆಯನ್ನು ರಾಜೀ ಮಾಡಿಕೊಂಡಿದ್ದರಿಂದ ಸರ್ವೆ ನಂ.541/1 ರ ಆಸ್ತಿಯನ್ನು ಖರೀದಿ ಮಾಡಿದ ಖರೀದಿದಾರರು ನನಗೆ ಮತ್ತು ಪ್ರತಿವಾದಿ 1 ರವರಿಗೆ ಸೈಟನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಮೂರು ಸೈಟುಗಳ ಪೈಕಿ ದೊಡ್ಡ ಸೈಟನ್ನು ನಾನು ಪಡೆದುಕೊಂಡಿದ್ದೇನೆ ಎಂದರ ಸಾಕ್ಷಿಯು ಮೂರು ಸೈಟುಗಳು ಸಹ ಒಂದೇ ವಿಸ್ತೀರ್ಣದ ಸೈಟುಗಳು ಎನ್ನುತ್ತಾರೆ. ನನಗೆ ಕೊಟ್ಟಿದ್ದಂತಹ ನಿವೇಶನವನ್ನು ನಾನು ಮಾರಾಟ ಮಾಡಿದ್ದೇನೆ ಎಂದರೆ ಸರಿ. ಚನ್ನಪಟ್ಟಣ ಟೌನ್ ನಲ್ಲಿ ನನಗೆ ಸಾಕಷ್ಟು ನಿವೇಶನಗಳು ಇವೆ ಎಂದರೆ ಸರಿಯಲ್ಲ. ನಾನು ನನಗೆ ಸೇರಿದ ಬೇರೆ ನಿವೇಶನಗಳಲ್ಲಿ ಕಟ್ಟುತ್ತಿರುವ ಮನೆಗೂ 1 ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿ ಯರಿಂದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರವನ್ನು ಈ ನ್ಯಾಯಾಲಯದಲ್ಲಿ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ